ನೀಡಿದ್ದರಿಂದ, ಸಹಸ್ರಾರು ಮಂದಿ ಸಾಂಪ್ರದಾಯಿಕ ದೋಣಿಗಳ ಮೀನುಗಾರರು ಬೇಗನೇ ಯಾಂತ್ರೀಕೃತ ಮೀನುಗಾರಿಕೆ ಪ್ರಾರಂಭಿಸುವುದನ್ನು ವಿರೋಧಿಸುತ್ತಿದ್ದಾರೆ. ಈತನಕ ಈ ಸಮಸ್ಯೆಯ ಪರಿಹಾರಕ್ಕೆ ಸರಕಾರ ಯಾವುದೇ ನಿಶ್ಚಿತ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಕರಾವಳಿಯಲ್ಲಿ ಪ್ರಕ್ಷುಬ್ಧ ಸ್ಥಿತಿ ಏರ್ಪಟ್ಟಿದ್ದು ಇದೇ ತಾರೀಖು ೧೭ರಂದು ಹೆಜಮಾಡಿಯಲ್ಲಿ ಕೆಲವು ಯಾಂತ್ರೀಕೃತ ದೋಣಿಗಳಿಗೆ ತೀವ್ರ ಹಾನಿಯಾಗಿದೆ ಎಂದು ತಿಳಿದು ಬಂದಿದೆ. ಈ ಕುರಿತು ಸರ್ಕಾರದ ನಿಲುಮೆ ಮತ್ತು ಕಾರ್ಯ ಕ್ರಮದ ಕುರಿತು ಸ್ಪಷ್ಟೀಕರಣ ನೀಡಬೇಕು ಮತ್ತು ಮುಂದೆ ಯಾವುದೇ ಬಿಕ್ಕಟ್ಟು ಹಾಗೂ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೆ, ಇವೊತ್ತು ಸಾಯಂಕಾಲ ೫ ಗಂಟೆಗೆ ಕರಾವಳಿ ತೀರದಿಂದ ಬಂದಿರತಕ್ಕ ಎಲ್ಲಾ ಶಾಸಕರ ಸಭೆಯನ್ನು ಕರೆದಿದ್ದೇನೆ. ಎಲ್ಲಾ ಮಾಹಿತಿಗಳನ್ನು ಒದಗಿಸಿ ಕೊಂಡು ಇದರ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ.

VIII ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ರಾಜ್ಯದಲ್ಲಿ ಪ್ರಾಥಮಿಕ ಪ್ರೌಢಶಾಲೆಗಳು ಪ್ರಾರಂಭವಾಗಿ ಸುಮಾರು ಒಂದೂವರೆ ತಿಂಗಳು ಕಳೆದಿದ್ದರೂ ಸಹ ಈ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಮಾಡಲು ಉಪಾಧ್ಯಾಯರುಗಳು ಇಲ್ಲ. ಉದಾಹರಣೆಗೆ ನನ್ನ ಕ್ಷೇತ್ರಕ್ಕೆ ಸೇರಿದ ಹಟ್ಟಿ ಹಾಗೂ ದಬ್ಬೇಘಟ್ಟ ಗ್ರಾಮಗಳ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೭ ತರಗತಿಗಳಿದ್ದು, ಈ ಶಾಲೆಗಳಲ್ಲಿ ಕೇವಲ ಒಬ್ಬಿಬ್ಬರು ಉಪಾಧ್ಯಾಯರು ಮಾತ್ರ ಇದ್ದಾರೆ. ಇದರಿಂದಾಗಿ ಪಾಠಪ್ರವಚನಗಳು ಸರಿಯಾಗಿ ನಡೆಯದೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಇದರಿಂದ ಗ್ರಾಮಾಂತರ ಶಾಲೆಗಳ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕೆಂಬ ಕಾಳಜಿ ಸರ್ಕಾರಕ್ಕಿ ಇದ್ದಂತಿಲ್ಲ. ಆದ್ದರಿಂದ ಸರ್ಕಾರ ದವರು ಕೂಡಲೇ ಕ್ರಮ ಕೈಗೊಂಡು ನನ್ನ ಕ್ಷೇತ್ರದಲ್ಲಿರುವ ಉಪಾಧ್ಯಾಯರುಗಳಿಲ್ಲದ ಶಾಲೆಗಳಿಗೆ ಕೂಡಲೇ ಉಪಾಧ್ಯಾಯರುಗಳನ್ನು ನೇಮಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡ ಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಈಗಾಗಲೇ ಕೆಲವು ಕಡೆಗಳಲ್ಲಿ ಉಪಾಧ್ಯಾಯ ರನ್ನು ನೇಮಕ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳುವ ಗ್ರಾಮಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿದ್ದರೆ ತಕ್ಷಣ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

IX ಗ್ರಾಮಾಂತರಗಳಲ್ಲಿ ಕೆಲಸ ಮಾಡುತ್ತಿರುವ ಶಾಲಾ ಅಧ್ಯಾಪಕರ ಸಂಬಳದಲ್ಲಿ ೧೦ ರೂಪಾಯಿ ಸೇವಾ ಶುಲ್ಕವನ್ನು ವಸೂಲು ಮಾಡುತ್ತಿರುವುದು

ಶ್ರೀ ಬಸವರಾಜು (ಬ್ರಹ್ಮಾವರ).—ಸರ್ಕಾರದ ಆದೇಶಾನುಸಾರ ಶಾಲಾ ಅಧ್ಯಾಪಕ ವರ್ಗ ದವರು ರಾಷ್ಟ್ರೀಕೃತ ಬ್ಯಾಂಕುಗಳಿಂದ ತಮ್ಮ ವೇತನ ಪಡೆಯಬೇಕಾದ ಅನಿವಾರ್ಯತೆ ಆರೇಳು ವರ್ಷಗಳಿಂದ ನಡೆದುಕೊಂಡು ಬಂದಿದ್ದು ಶಾಲಾ ಸಿಬ್ಬಂದಿ ವರ್ಗಕ್ಕೆ ಎಷ್ಟೋ ಅನುಕೂಲವಾಗಿತ್ತು. ಆದರೆ ಈಗ ತಾಲ್ಲೂಕು ಮುಖ್ಯ ಕೇಂದ್ರಗಳನ್ನುಳಿದು ಉಳಿದ ಎಲ್ಲಾ ಗ್ರಾಮಾಂತರ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಶಾಲಾ ಅಧ್ಯಾಪಕರ ಸಂಬಳದಲ್ಲಿ ರೂಪಾಯಿ ೧೦ ರವರೆಗೆ ಸೇವಾ ಶುಲ್ಕ ಎಂಬುದಾಗಿ ಕಡಿತವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಶಾಲಾ ಅಧ್ಯಾಪಕರ ವರ್ಗಕ್ಕೆ ಪಕ್ಷಪಾತವಾಗಿರುವುದು ಮಾತ್ರವಲ್ಲದೆ ವಿನಾಕಾರಣ ದಂಡ ವಿಧಿಸಿದಂತಾಗುತ್ತದೆ. ಬ್ಯಾಂಕುಗಳು ಸರಕಾರಿ ನೌಕರರ ಪಿಂಚಣಿಗೂ ತೋರುವ ವಿನಾಯಿತಿಯನ್ನು ಇವರಿಗೂ ಅನ್ವಯವಾಗುವಂತೆ ಮಾಡಿಸುವರೆ ರಿಸರ್ವ್ ಬ್ಯಾಂಕ್‌ನ್ನು ವಿನಂತಿಸಿಕೊಳ್ಳುವರೆ? ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ನಾನು ಕಳೆದ ೧೦ ವರ್ಷಗಳ ಹಿಂದೆ ಉಡುಪಿಗೆ ಹೋಗಿದ್ದಾಗ ಅನೇಕ ಉಪಾಧ್ಯಾಯರು ಬಂದು ಈ ವಿಚಾರವನ್ನು ಹೇಳಿದರು. ಕೆಲವು ಬ್ಯಾಂಕ್‌ಗಳು ಸರ್ವೀಸ್ ಚಾರ್ಜನ್ನು ತೆಗೆದುಕೊಳ್ಳುತ್ತವೆ, ಕೆಲವು ಬ್ಯಾಂಕುಗಳು ತೆಗೆದುಕೊಳ್ಳುವುದಿಲ್ಲ. ಈ ರೀತಿ ತಾರತಮ್ಯ ಮಾಡುವುದು ಬೇಡವೆಂದು ನಾನು ಬ್ಯಾಂಕಿನ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಇದನ್ನು ವಿಚಾರ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.